2000-2001ನೇ ಸಾಲಿನಲ್ಲಿ ಇದುವರೆಗೂ ಅಂದರೆ ದಿನಾಂಕ: 26-2-2001 ರವರೆಗೆ ಒಟ್ಟು 404 ಹೊಸ ಬಸ್ಸುಗಳನ್ನು ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಭಾಗಗಳಿಗೆ ಹಂಚಿಕೆ ಮಾಡಲಾಗಿದೆ. ಮುಂಬರುವ ವರ್ಷದಲ್ಲಿ ಅಂದರೆ 2001ನೇ ಸಾಲಿನಲ್ಲಿ ಒಟ್ಟು 450 ಹೊಸ ವಾಹನಗಳನ್ನು ಒದಗಿಸಲು ಸಂಸ್ಥೆಯು ಯೋಜನೆಯನ್ನು ಹಾಕಿ ಕೊಂಡಿರುತ್ತದೆ.

ಇ) ಬಂದಿದೆ.

ಈ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 372 ಗ್ರಾಮಗಳಿದ್ದು ಇವುಗಳ ಪೈಕಿ ಸಂಚಾರ ಯೋಗ್ಯ ರಸ್ತೆಗಳಿಲ್ಲದ ಕಾರಣ 11 ಗ್ರಾಮಗಳ ಹೊರತಾಗಿ ಎಲ್ಲಾ ಗ್ರಾಮಗಳಿಗೆ ಬಸ್ ಸೌಕರ್ಯ ಕಲ್ಪಿಸಲಾಗಿದೆ. ಹಾಲಿ ಸಾರಿಗೆ ಸೌಲಭ್ಯ ಸಮರ್ಪಕವಾಗಿದ್ದು, ಹೆಚ್ಚುವರಿ ಬೇಡಿಕೆ ಬಂದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಹಾಗೂ ಸಂಚಾರ ಯೋಗ್ಯ ರಸ್ತೆ ಸುಧಾರಣೆಗೊಂಡನಂತರ ಸಾರಿಗೆ ಸೌಲಭ್ಯ ಕಲ್ಪಿಸಲು ಕ್ರಮ ಜರುಗಿಸಲಾಗುವುದು.

ಹುಬ್ಬಳ್ಳಿ ತಾಲ್ಲೂಕಿನ ವಿಂಗಡಣೆ

907(1041) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕು ಅತೀ ದೊಡ್ಡ ತಾಲ್ಲೂಕಿ ಎಂಬ ಸರ್ಕಾರದ ಗಮನಕ್ಕೆ ಬಂದಿದೆಯೆ;

2) ಆಡಳಿತಾತ್ಮಕ ದೃಷ್ಟಿಯಿಂದ ಹುಬ್ಬಳ್ಳಿ ಉತ್ತರ, ಹುಬ್ಬಳ್ಳಿ ದಕ್ಷಿಣ ಎಂದು ಬೇರ್ಪಡಿಸಿ ಎರಡು ತಹಶೀಲ್ದಾರ ಕಾರ್ಯಾಲಯಗಳು ಕಾರ್ಯನಿರ್ವಹಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

3) ಬಂದಿದ್ದಲ್ಲಿ, ಯಾವ ವರ್ಷದಿಂದ ಪ್ರಾರಂಭ ಮಾಡಲಾಗುವುದು; ಇಲ್ಲವಾದಲ್ಲಿ ಕಾರಣವೇನು?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು):

1) ಹೌದು

2) ಸರ್ಕಾರದ ಪರಿಶೀಲನೆಯಲ್ಲಿದೆ.

3) ಸರ್ಕಾರದ ಪರಿಶೀಲನೆಯಲ್ಲಿದೆ.

ವಾಹನ ತೆರಿಗೆ ಕುರಿತು

908 (1023) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ವಾಹನ ತೆರಿಗೆ ರೂಪದಲ್ಲಿ ಎಷ್ಟು ತೆರಿಗೆಯನ್ನು ಸಂಗ್ರಹಿಸುತ್ತಿದೆ (ಅದರ ಒಟ್ಟು ಮೊತ್ತವೆಷ್ಟು?

ಆ) ಈ ತೆರಿಗೆ ಪದ್ಧತಿಯನ್ನು ಸುಧಾರಿಸಲು ಸರ್ಕಾರವು ಯಾವ ಕ್ರಮವನ್ನು ತೆಗೆದುಕೊಂಡಿದೆ?

ಇ) ಈ ತೆರಿಗೆ ಹಣದಲ್ಲಿ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ? ವಿವರ ನೀಡುವುದು.

ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಕಳೆದ 4 ವರ್ಷಗಳ ವಿವರ ಈ ಕೆಳಗಿನಂತಿದೆ.

1997-98	-	ರೂ. 44892.91 ಲಕ್ಷಗಳು
1998-99	-	ರೂ. 40308.00 ಲಕ್ಷಗಳು
1999-2000	-	ರೂ. 47782.00 ಲಕ್ಷಗಳು
2000-2001 ಜನವರಿ ಅಂತ್ಯದವರೆಗೆ	-	ರೂ. 39000.00 ಲಕ್ಷಗಳು

ಆ) ತೆರಿಗೆ ಸುಧಾರಣಾ ಆಯೋಗದ ಅಂತಿಮ ವರದಿ ನಿರೀಕ್ಷೆಯಲ್ಲಿದೆ. ಸದರಿ ಶಿಫಾರಸ್ಸಿನ ಮೇಲೆ ನಿರ್ಣಯಿಸಿದಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಸಂಗ್ರಹವಾದ ವಾಹನ ತೆರಿಗೆಯಲ್ಲಿ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ನೇರವಾಗಿ ಯಾವುದೇ ಹಣ ತೊಡಗಿಸಲಾಗುತ್ತಿಲ್ಲ. ಈ ತೆರಿಗೆಯನ್ನು ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಉಪಯೋಗಿಸಲು ರಾಜ್ಯದ ಸಂಚಿತ ನಿಧಿಗೆ ಜಮಾ ಮಾಡಲಾಗುತ್ತಿದೆ.

ಕೃಷಿ ಸಾಲ ಯೋಜನೆ

909 (1024) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೃಷಿ ಚಟುವಟಿಕೆಗಳಿಗಾಗಿ ಸಹಕಾರಿ ಸಂಸ್ಥೆಗಳು ನೀಡುತ್ತಿರುವ ಸಾಲದ ಮೊತ್ತವೆಷ್ಟು?

2) ಈ ಸಾಲದ ಮೊತ್ತವನ್ನು ಹೆಚ್ಚಿಸುವ ತೀರ್ಮಾನ ಸರ್ಕಾರ ಹೊಂದಿದೆಯೇ?

3) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಡಿ. ಕೆ. ಶಿವಕುಮಾರ್ (ಸಹಕಾರ ಸಚಿವರು) :

1) ಸಹಕಾರ ಕೃಷಿ ಪರಿಷತ್ತಿನ ಸಂಸ್ಥೆಗಳಿಂದ ಕೃಷಿ ಚಟುವಟಿಕೆಗಳಿಗಾಗಿ 1999-2000 ನೇ ಸಾಲಿನಲ್ಲಿ ರೂ. 1235.00 ಕೋಟಿ ಸಾಲವನ್ನು ನೀಡಿದೆ.

2) ಹೌದು

3) ಮೂರು ವರ್ಷಗಳ ಅವಧಿಯಲ್ಲಿ ಕೃಷಿ ಸಾಲವನ್ನು ಎರಡು ಪಟ್ಟು ಹೆಚ್ಚಿಸಬೇಕೆಂಬ ಉದ್ದೇಶವನ್ನು ಹೊಂದಲಾಗಿದೆ. ಈ ದಿಸೆಯಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ, ಸಾಲ ನೀಡಿಕೆಯ ಗುರಿಯನ್ನು ನಿಗದಿಪಡಿಸಲಾಗಿದೆ. ಸಾಲ ನೀಡಿಕೆಯ ಸಾಲದ ವಸೂಲಾತಿಯನ್ನು ಹಾಗೂ